SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar

SDUAHER

**UINIVERSITY LIBRARY & LEARNING RESOURCE CENTRE**

Online Newspaper Clipping Service

**Dated, Wednesday, 08th March – 2017**

**Pg.No.02**

DECCAN HERALD

## For water



The students of Devaraj Urs Medical College take out a march in support of the agitation demanding permanent irrigation project for the district, in Kolar on Tuesday. The agitation has entered 269th day. DH PHOTO

# CODEUNIK - NOTIFICATION

## PG Medical & Dental Admissions - 2017

CONSORTIUM OF DEEMED UNIVERSITIES IN KARNATAKA

Office: No. 132, 2nd Floor, 11th Main, 17th Cross, Malleshwaram, Bangalore - 560 055.
Mobile: 96861 26511, Fax: 080-23568309, E-mail: codeunik2017@gmail.com

**The Consortium has been granted permission by the Government of Karnataka to establish a single window approach to ensure centralized counseling.**

### The Member Universities

- ✓ Manipal University, Manipal
- ✓ KLE Academy of Higher Education & Research, Belagavi
- ✓ Sri Devaraj Urs Academy of Higher Education and Research, Kolar
- ✓ Yenepoya University, Mangalore
- ✓ J.S.S.University, Mysore
- ✓ Sri Siddhartha Academy of Higher Education, Tumkur
- ✓ NITTE University, Mangalore
- ✓ BLDE University, Bijapur

**o Invites application for admission to Post Graduate Medical and Dental Courses in its 8 member Universities o Seats offered during counseling include approximately o 650 PG Medical seats o 170 Medical Diploma seats o 246 PG Dental Degree seats o Those who intend to apply are advised to visit the CODEUNIK website (www.codeunik.org) for all details and updates.**

**Start Date** for Online Application Form: **09.03.2017**

**Last date** for completed application Forms: **28.03.2017**

**Counseling Date : 10.04.2017 to 12.04.2017**

**Applications are to be filled online on our website www.codeunik.org**

The Fee for CODEUNIK PGET Medical and Dental Application 2017 is ₹ 1500/- (Rupees One Thousand Five hundred only) and it should be made online. The same will not be refunded due to any reason.

**Note: No offline Applications are being entertained.**

**Note: Neither the application form nor filled in Applications will be sold or received in CODEUNIK office or by any Member Institutions.**

Dr. Prabhakar Kore
President, CODEUNIK

ಪ್ರಜಾವಾಣಿ ಬುಧವಾರ ● ಮಾರ್ಚ್ 8, 2017



ಕೋಲಾರದಲ್ಲಿ ನಡೆಯುತ್ತಿರುವ 269ನೇ ದಿನದ ನೀರಾವರಿ ಹೋರಾಟಕ್ಕೆ ದೇವರಾಜ ಅರಸು ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು ಬೆಂಬಲ ವ್ಯಕ್ತಪಡಿಸಿ ಮಂಗಳವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು.

### 269ನೇ ದಿನ ಪೂರ್ಣಗೊಳಿಸಿದ ನೀರಾವರಿ ಹೋರಾಟ

# ವೈದ್ಯಕೀಯ ವಿದ್ಯಾರ್ಥಿಗಳ ಬೆಂಬಲ

ಪ್ರಜಾವಾಣಿ ವಾರ್ತೆ

ಕೋಲಾರ: ಶಾಶ್ವತ ನೀರಾವರಿ ಯೋಜನೆ ಜಾರಿಗಾಗಿ ಒತ್ತಾಯಿಸಿ ನಗರದಲ್ಲಿ ನೀರಾವರಿ ಹೋರಾಟ ವೇದಿಕೆಯಿಂದ ನಿರಂತರವಾಗಿ ನಡೆಯುತ್ತಿರುವ ಹೋರಾಟ 269 ದಿನ ಪೂರ್ಣಗೊಳಿಸಿದೆ. ನಗರ ಹೊರವಲಯದ ದೇವರಾಜ ಅರಸು ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು ಬೆಂಬಲ ವ್ಯಕ್ತಪಡಿಸಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಧ್ಯಾಪಕ ಡಾ.ಮುನಿನಾರಾಯಣ ಮಾತನಾಡಿ, 'ರೈತರು ಕೃಷಿ ಚಟುವಟಿಕೆ ನಡೆಸುತ್ತಿದ್ದಾಗ ಸ್ಥಿತಿವಂತರಾಗಿದ್ದರು. ನೀರಿನ ಸಮಸ್ಯೆ ಎದುರಾದಾಗಿನಿಂದ ರೈತರು, ಮಕ್ಕಳು ಗಂಭೀರ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಇದರಿಂದಾಗಿ ಜಿಲ್ಲೆಯ ಅಳಿವು ಉಳಿವಿನ ಪ್ರಶ್ನೆ ಕಾಡುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಸರ್ಕಾರಗಳು ಅನವಶ್ಯಕ ಯೋಜನೆಗಳನ್ನು ಜಾರಿಗೊಳಿಸುವ ಬದಲು ಬಯಲು ಸೀಮೆ ಜಿಲ್ಲೆಗಳಿಗೆ ನೀರಾವರಿ ಯೋಜನೆ ಅನುಷ್ಠಾನಗೊಳಿಸಿದ್ದರೆ ಸಾಕಿತ್ತು. ರಾಜ್ಯಕ್ಕೆ ಅಗತ್ಯವಿರುವ ಸಂಪನ್ಮೂಲವನ್ನು ರೈತರು ಕ್ರೋಡೀಕರಿಸಿ ಕೊಡುತ್ತಿದ್ದರು' ಎಂದರು.

'ಈ ಹಿಂದೆ ಅವಿಭಜಿತ ಕೋಲಾರ ಜಿಲ್ಲೆಗಳ ಮೇಲೆ ಅವಲಂಬಿತವಾಗಿ ಸರ್ಕಾರಗಳು ನಡೆಯುತ್ತಿದ್ದವು. ಆದರೆ ಈಗ ನೀರಿಗಾಗಿ ಹೋರಾಟ ಮಾಡುವಂತ ಸ್ಥಿತಿ ನಿರ್ಮಾಣವಾಗಿರುವುದು ವಿಷಾದಕರ ಸಂಗತಿ. ಕುಡಿಯುವ ನೀರು ಒದಗಿಸಬೇಕಾದ ಜನಪ್ರತಿನಿಧಿಗಳು ಮೈಮರೆತಿದ್ದಾರೆ. ಈ ಭಾಗದ ಜನರು ಫ್ಲೋರೈಡ್ ನೀರನ್ನು ಕುಡಿದು ಕಾಯಿಲೆಗಳಿಗೆ ಸಿಲುಕಿ ನರಳುವಂತಾಗಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ವಿದ್ಯಾರ್ಥಿನಿ ವನಿತಾ ಮಾತನಾಡಿ, 'ರೈತರು ಕೃಷಿ ಬಿಟ್ಟು ಜೀವನ ರೂಪಿಸಿಕೊಳ್ಳಲು ಬೇರೆ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಇದೇ ಪರಿಸ್ಥಿತಿ ಮುಂದುವರಿದರೆ ಕೋಲಾರ ಜಿಲ್ಲೆಯು ಮರುಭೂಮಿಯಾಗುವುದರಲ್ಲಿ ಅನುಮಾನವಿಲ್ಲ' ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಗೂ ಮುನ್ನಾ ವಿದ್ಯಾರ್ಥಿಗಳು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಹೆಚ್ಚುವರಿ ಜಿಲ್ಲಾಧಿಕಾರಿ ಕೆ.ವಿದ್ಯಾಕುಮಾರಿ ಅವರಿಗೆ ಈ ಬಗ್ಗೆ ಮನವಿ ಸಲ್ಲಿಸಿದರು.

ಪ್ರಾಂಶುಪಾಲ ಹರೀಂದ್ರ ಕುಮಾರ್, ಎಂಜಿನಿಯರ್‌ಗಳಾದ ಹನುಮಂತರಾವ್, ಕೋದಂಡರಾಮು, ವ್ಯವಸ್ಥಾಪಕ ಜಗನ್ನಾಥ್, ವಿದ್ಯಾರ್ಥಿಗಳಾದ ಮಹಿಮಾ ಕಾಳೆ, ಪ್ರಿಯತಮ್, ಸಿದ್ಧಾರ್ಥ, ಧ್ರುವನ್, ಯಶ್ವಂತ್, ಎಸ್. ಕುಮುದಾ, ಮೇಘನಾ, ಪ್ರೀತಮ್ ರೆಡ್ಡಿ, ಚೈತ್ರಾ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೋಲಾರ – ಚಿಕ್ಕಬಳ್ಳಾಪುರ ಜಿಲ್ಲಾ ದರ್ಶನ ಸಂಯುಕ್ತ ಕರ್ನಾಟಕ ಬುಧವಾರ, 08, ಮಾರ್ಚ್, 2017 ಬೆಂಗಳೂರು

# ಶುದ್ಧ ನೀರಿಗಾಗಿ ವೈದ್ಯ ವಿದ್ಯಾರ್ಥಿಗಳ ಆಗ್ರಹ



**ಕೋಲಾರ:** ಜಿಲ್ಲೆಗೆ ಶಾಶ್ವತ ನೀರಾವರಿ ದೊರಕಿಸಲು ಆಗ್ರಹಿಸಿ ಮಂಗಳವಾರ ದೇವ ರಾಜ್ ವೈದ್ಯಕೀಯ ವಿ.ವಿ ವಿದ್ಯಾರ್ಥಿಗಳು ನಗರದಲ್ಲಿ ರ್‍ಯಾಲಿ ನಡೆಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ವಿ.ವಿ ಉಪ ಕುಲಪತಿ ಡಾ।ರಘುವೀರ್, ಸಮುದಾಯ ಆರೋಗ್ಯ ವಿಭಾಗದ ಡಾ.ಮುನಿನಾರಾಯಣ ನೇತೃತ್ವ ವಹಿಸಿದ್ದರು. ಜಿಲ್ಲೆಯಲ್ಲಿ ಫ್ಲೋರೈಡ್ ನೀರಿನಿಂದಾಗಿ ಜವಾಬ್ದಾರಿಯುಳ್ಳವರು ಮೈಮರೆತಿರುವ ಕಾರಣ ಈ ಭಾಗದ ಜನ ಫ್ಲೋರೈಡ್ ನೀರನ್ನು ಕುಡಿದು ದಂತ ಫ್ಲೋರೋಸಿಸ್, ಮೂತ್ರಕೋಶದಲ್ಲಿ ಕಲ್ಲು, ಸ್ಕೆಲಿಟನ್ ಫ್ಲೋರೋಸಿಸ್, ಅಂಗವಿಕಲತೆಯ ಕಾಯಿಲೆಗಳಿಗೆ ಸಿಲುಕಿ ನರಳುವಂತಾಗಿದೆ.

ಹಾಗಾಗಿ ಜಿಲ್ಲೆಗೆ ಶುದ್ಧ ನೀರು ಒದಗಿಸಲು ಸರ್ಕಾರ ತುರ್ತಾಗಿ ಮುಂದಾಗಬೇಕು ಎಂದು ಮನವಿಯಲ್ಲಿ ಪ್ರತಿಪಾದಿಸಲಾಗಿದೆ.

ಕಾಲೇಜಿನ ಪ್ರಾಂಶುಪಾಲ ಹರೇಂದ್ರ ಕುಮಾರ್, ಎಕ್ಸಿಕ್ಯೂಟೀವ್ ಇಂಜಿನಿಯರ್ ಹನುಮಂತರಾವ್, ಇಂಜಿನಿಯರ್ ಕೋದಂಡರಾಮ, ಮ್ಯಾನೇಜರ್ ಜಗನ್ನಾಥ್, ಕಾಲೇಜಿನ ಛಾಯಾಗ್ರಾಹಕ ಶ್ರೀನಿವಾಸ್, ವಿದ್ಯಾರ್ಥಿಗಳಾದ ವನಿತ, ಸುದರ್ಶನ್, ಮಹಿಮಾ ಕಾಳೆ, ಪ್ರೀತಂ, ಸಿದ್ಧಾರ್ಥ್, ಧ್ರುವನ್, ಯಶ್ವಂತ್, ರಾಮ್‌ಕಿರಣ್, ಎಸ್.ಕುಮುದ, ಮೇಘನಾ, ಪ್ರೀತಮ್‌ರೆಡ್ಡಿ, ಪಿಕೆ ಮತ್ತಿತರರು ಭಾಗವಹಿಸಿದ್ದರು. ಇದಕ್ಕೂ ಮುನ್ನ ನೀರಾವರಿ ವೇದಿಕೆಯಲ್ಲಿ ಧರಣೆ ನಡೆಸಲಾಯಿತು.

ಕೋಲಾರ ಪತ್ರಿಕೆ



ಅರಸು ವೈದ್ಯ ಕಾಲೇಜಿನ ಸಿಬ್ಬಂದಿ, ವಿದ್ಯಾರ್ಥಿಗಳಿಂದ

# ನೀರಾವರಿ ಹೋರಾಟಕ್ಕೆ ಬೆಂಬಲ



ಕೋಲಾರ ಮಾ ೭

ನೀರಾವರಿ ಹೋರಾಟವು ೨೬೯ನೇ ದಿನಕ್ಕೆ ಕಾಲಿಟ್ಟಿದ್ದು, ಶ್ರೀ ದೇವರಾಜ್ ಅರಸ್ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಹೆಚ್ಚುವರಿ ಜಿಲ್ಲಾಧಿಕಾರಿ ಕೆ. ವಿದ್ಯಾಕುಮಾರಿರಿಗೆ ಉಪ ಕುಲಪತಿ ಡಾ॥ ರಘು ವೀರ್ ಮತ್ತು ಸಿಬ್ಬಂದಿ ಮನವಿ ಪತ್ರ ಸಲ್ಲಿಸಿದ ನಂತರ ವೇದಿಕೆ ತನಕ ರ್‍ಯಾಲಿ ನಡೆಸಿ ಧರಣಿಯಲ್ಲಿ ಪಾಲ್ಗೊಂಡಿದ್ದರು.

ಕಾಲೇಜಿನ ಪ್ರಾಧ್ಯಾಪಕ ಡಾ॥ ಮುನಿನಾರಾಯಣ ಮಾತನಾಡಿ ಜಿಲ್ಲೆಯಲ್ಲಿ ೩೦ ವರ್ಷಗಳ ಹಿಂದೆ ಸಮೃದ್ಧವಾಗಿ ಮಳೆ ಬೀಳುತ್ತಿದ್ದ ಕಾರಣ ರೈತರು ವ್ಯವಸಾಯ ಮಾಡಿಕೊಂಡು ಸ್ಥಿತಿವಂತರಾಗಿದ್ದರು. ಈಗ ಜಿಲ್ಲೆಯ ಜನರು ಅನಾರೋಗ್ಯ ಪೀಡಿತರಾಗಿ ಬದುಕುತ್ತಿದ್ದು ಜಿಲ್ಲೆಯ ಉಳಿವಿಗಾಗಿ ಸರ್ಕಾರ ಶಾಶ್ವತ ನೀರಿನ ಯೋಜನೆ ಅನುಷ್ಠಾನಗೊಳಿಸಬೇಕೆಂದರು.

ಭಾಂಡಾಗ್ರಾಹಕ ಶ್ರೀನಿವಾಸಮೂರ್ತಿ ಮಾತನಾಡಿ ರಾಜ್ಯಕ್ಕೆ ಎಲ್ಲ ರೀತಿ ಕೊಡುಗೆಗಳನ್ನು ಕೊಟ್ಟ ಜಿಲ್ಲೆಯಲ್ಲಿ ನೀರಿಗಾಗಿ ಹೋರಾಟ ಮಾಡುತ್ತಿರುವುದು ದುರಂತವೆಂದರು.

ಕಾಲೇಜಿನ ವಿದ್ಯಾರ್ಥಿಗಳಾದ ವನಿತ, ಸುದರ್ಶನ್ ಮಾತನಾಡಿ ನಾವು ಬೇರೆ ಜಿಲ್ಲೆಯವರಾದರೂ ಓದುವ ನಮ್ಮ ಅವಧಿಯಲ್ಲಿ ಜಿಲ್ಲೆಯ ನೀರಿನ ಸಮಸ್ಯೆಯ ಹೋರಾಟಕ್ಕೆ ಬೆನ್ನೆಲುಬಾಗಿ ಎಲ್ಲ ರೀತಿ ಸಹಕಾರವನ್ನು ನೀಡುತ್ತೇವೆ ಎಂದು ಘೋಷಿಸಿದರು.

ಪ್ರಾಂಶುಪಾಲ ಹರೀಂದ್ರ ಕುಮಾರ್, ಕಾರ್ಯಪಾಲಕ ಅಭಿಯಂತರ ಹನುಮಂತ ರಾವ್, ಅಭಿಯಂತರ ಕೋದಂಡರಾಮ, ವ್ಯವಸ್ಥಾಪಕ ಜಗನ್ನಾಥ್, ವಿದ್ಯಾರ್ಥಿಗಳಾದ ಮಹಿಮಾ ಕಾಳೆ, ಪ್ರಿಯತಮ್, ಸಿದ್ದಾರ್ಥ, ಧ್ರುವನ್, ಯಶ್ವಂತ್, ರಾಮಕಿರಣ್, ಎಸ್. ಕುಮುದ, ಮೇಘನಾ, ಪ್ರೀತಮ್ ರೆಡ್ಡಿ, ಪತಿ, ಸಂಚಾಲಕರಾದ ಹೊಳಲಿ ಪ್ರಕಾಶ್, ವಿ.ಕೆ. ರಾಜೇಶ್, ಎಸ್.ಆರ್. ಮುರಳಿಗೌಡ, ಡಾ॥ ರಮೇಶ್, ಎಪಿಎಂಸಿ ಪುಟ್ಟರಾಜು, ಕೆ.ಬಿ. ಮುನಿವೆಂಕಟಪ್ಪ, ನಾರಾಯಣ ಸ್ವಾಮಿ, ಶಿವಣ್ಣ, ನಾಗವೇಣಮ್ಮ, ಜಮುನಾರಾಣಿ ಇತರರಿದ್ದರು.